Regd No BG 155

Sri "SATYAVADI"
— DAILY —
MYSORE 4
46 th Year

Protect the cow

— ಶ್ರೀ —

# ಸತ್ಯವಾದಿ
# SATYAVADI

ಸ್ಥಾಪಕರು— ಅರಮನೆ ಸಿಂಹೇದಾರ್ ಎಂ. ವಿ. ಸುಬ್ಬರಾಯುರು [ಬಿಡಿ ಪ್ರತಿ 3 ಪೈ

3—1—1962

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
"ಸತ್ಯವಾದಿ" ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಗೋಸಂರಕ್ಷಣೆ ಮಾಡಿ

## ಗೋವಧೆ ಮಾಡುವವರಿಗೆ ಓಟು ಕೊಡಬೇಡಿ

ಮಂಗಳೂರಿನಲ್ಲಿ ಮೊನ್ನೆ ಕರ್ನಾಟಕ ಪ್ರಾಂತೀಯ ಹಿಂದೂ ಮಹಾಸಭೆ ಆಶ್ರಯದಲ್ಲಿ ಗೋ ಕ್ಷಣಾ ಸಮ್ಮೇಳನ ನಡೆಯಿತು. ಅಧ್ಯಕ್ಷತೆ ವಹಿಸಿದ್ದ ಶ್ರೀ ನಿತ್ಯಾನಂದ ಬ್ಯಾನರ್ಜಿಯವರು ಭಾಷಣ ಮಾಡುತ್ತಾ 'ಮುಸ್ಲಿಮರ 6 ಕೋಟಿ ವರ್ಗಗಳನ್ನು ಓಡಿಯಲು ಕಾತರವಾಗಿರುವ' ಕಾಂಗ್ರೆಸ್, ಗೋವಧೆಯನ್ನು ವಿರೋಧಿಸುವುದಿಲ್ಲ ಎಂದರು. ಹಿಂದೂಗಳು ಒಗ್ಗಟ್ಟಾಗಿ 'ಗೋವಧೆ ಮಾಡುವವರನ್ನು' ಚುನಾವಣೆಯಲ್ಲಿ ಸೋಲಿಸಿ ಗೋವಧೆಯ ಮೇಲೆ ಪೂರ್ಣ ನಿಷೇಧವನ್ನು ಸಾಧಿಸಬೇಕು ಎಂದರು. ಮುಸ್ಲಿಮ್ ರಾಷ್ಟ್ರೀಯ ಆಕ್ರೋಪಗಳನ್ನು ಕುರಿತು ಬ್ಯಾನರ್ಜಿಯವರು ಮಾತನಾಡುತ್ತಾ, ಮುಸ್ಲಿಮ್ ರಾಜ್ಯ ಆಗಿರುವ ಅಫ್ಘಾನಿಸ್ತಾನದಲ್ಲಿ ಈಗ ಕೂಡ ಗೋವಧೆ ನಿಷೇಧವಾಗಿದೆ. ಮುಸ್ಲಿಮರು ಹೆಚ್ಚಾಗಿರುವ ಕಾಶ್ಮೀರದಲ್ಲಿ ಗೋವಧೆ ಪೂರ್ಣ ನಿಷೇಧವಾಗಿದೆ ಎಂದರು. ಮೊಗಲ್ ಚಕ್ರವರ್ತಿಗಳಾದ ಅಕ್ಬರ್ ಮತ್ತು ಹುಮಾಯೂರ್ರು ಕೂಡ ಗೋವಧೆಯನ್ನು ನಿಷೇಧಿಸಿದ್ದರು, ಪವಿತ್ರ ಕುರಾನಿನಲ್ಲೂ ಕೂಡ ಗೋವಧೆ ಮಾಡಬೇಕೆಂದು ಇಲ್ಲ ಎಂದು ಅವರು ನುಡಿದರು. ಗೋವಧೆಯ ನಿಷೇಧಕ್ಕೆ ಮುಸ್ಲಿಂ ಸೋದರರು ಬೆಂಬಲಿಸಬೇಕೆಂದು ಅವರು ಹೇಳಿದರು.

## ಸಿಡಿಬಿನಿಂದ ಸಾವು

ಕರಾಚಿಯಲ್ಲಿ ಸಿಡಿಬಿನಿಂದ ಇದುವರೆಗೆ ಮುನ್ನೂರು ಜನ ಮರಣಹೊಂದಿರುವರು.

## ಕಾಮನ್ವೆಲ್ತ್ ಸಮ್ಮೇಳನ

ಗೋವಾ ಮೇಲಿನ ಭಾರತದ ಕಾರ್ಯಾಚರಣೆಯನ್ನು ಪರಿಶೀಲಿಸಲು ಏರ್ಪಡ್ಡಿನಲ್ಲಿ ಕಾರ್ಮಿಕ ವೆಲ್ಸ್ ಸಮ್ಮೇಳನ ಸೇರಬಹುದೆಂದು ಲಂಡನ್ ವಾರ್ತೆ.

× ಈ ವರ್ಷ ಚಿಕ್ಕಿ ಉತ್ಪಾದನೆ ಉತ್ತಮವಾಗಿದೆ

## ರಾಮರಾಜ್ಯ ಪರಿಷತ್‌ನ ಪ್ರಣಾಳಿಕೆ

ವಾರಣಾಸಿ 2— ರಾಮರಾಜ್ಯ ಪರಿಷತ್ತಿನ ಚುನಾವಣಾ ಪ್ರಣಾಳಿಕೆಯಲ್ಲಿ, ಚೀನಾ ವಶ ಪಡಿಸಿಕೊಂಡಿರುವ ಪ್ರಾಂತಗಳು ಭಾರತದ ಮೇಲಿನ ಆಕ್ರಮಣವನ್ನು ಬಿಡಗಡೆ ಮಾಡುವುದಾಗಿ ಮತದಾರರಿಗೆ ಭರವಸೆ ಕೊಡಲಾಗಿದೆ — ಅಖಂಡ ಭಾರತದ ಸ್ಥಾಪನೆಗೆ ಶ್ರಮಿಸುವುದಾಗಿ ತಿಳಿಸಿದೆ — ಸಾಂಸ್ಕೃತಿಕವಾಗಿ, ರಾಜಕೀಯವಾಗಿ, ಭೌಗೋಳಿಕವಾಗಿ ಭಾರತಕ್ಕೆ ಹತ್ತಿರವಿರುವ ಸಯಾಂ ಬರ್ಮಾ, ಜಾವಾ, ಸುಮಾತ್ರ, ಸಿಲೋನ್, ಸಿಕಿಂ, ಟಿಬೆಟ್, ಅಫ್ಘಾನಿಸ್ತಾನ ಮತ್ತಿತರ ಪುಟ್ಟಮುಟ್ಟಲ ದೇಶಗಳು ಮತ್ತು ದ್ವೀಪಗಳನ್ನು ಭಾರತಕ್ಕೆ ಸೇರಿಸಿ ವಿಶಾಲ ಭಾರತ ಸ್ಥಾಪಿಸುವುದಾಗಿ ತಿಳಿಸಿದೆ; ಆದರೆ ಈ ಕಾರ್ಯಗಳಿಗೆ ಬಲಪ್ರಯೋಗ ನಡೆಸುವುದಿಲ್ಲವೆಂದೂ ತಿಳಿಸಿದೆ; ಅನೇಕ ಸಂಕಷ್ಟಕರ ಗೆಗಳನ್ನು ರದ್ದುಗೊಳಿಸುವುದಾಗಿಯೂ ಗೋವಧೆ ಪ್ರತಿಬಂಧಿಸುವುದಾಗಿಯೂ ತಿಳಿಸಿದೆ

## ಗಾಂಧೀಜಿ ಪಾತ್ರಧಾರಿ

ನವದೆಹಲಿ 1— ಬೊಂಬಾಯಿ ಚಲನಚಿತ್ರ ಪ್ರಪಂಚದ ಅಶ್ವೇನೂಪ್ರಸಿದ್ಧನಲ್ಲದ ನಟ ಕಷ್ಣ ಪಂವಲ್ಕರ್ ಮಾತ್ರ ಕಾರ್ಬನ್ ತಯಾರಿಸಲಾಗುವ 3೦೦೦೦೦೦ ಡಾಲರು ವೆಚ್ಚದ, ಮಹಾತ್ಮಾ ಗಾಂಧಿಯವರಿಗೆ ಸಂಬಂಧಿಸಿದ 'ಸೈಕ್ ಅವರ್ಸ್ ಟು ರಾಮ' ಚಿತ್ರದಲ್ಲಿ ಮಹಾತ್ಮಾ ಗಾಂಧಿಯವರಾಗಿ ಅಭಿನಯಿಸಲು ಆರಿಸಲ್ಪಟ್ಟಿದ್ದಾರೆ

೦೦

ಬರುವ ಆಗಷ್ಟಿನಲ್ಲಿ ಶುಕ್ರಗ್ರಹಕ್ಕೆ 2 ಕ್ಷಿಪಣಿಗಳನ್ನು ಅಮೆರಿಕಾ ಹಾರಿಸುವುದು

ಪಶ್ಚಿಮ ಇರಿಯರ್‌ಗೆ ಸ್ವಯಂ ನಿರ್ಣಯಾಧಿಕಾರ ಹಕ್ಕು ದೊರೆಯುವುದು.

ಪಾಂಜೀಂನಲ್ಲಿ ನಿನ್ನೆ ಭಾರತ ಸ್ಟೇಟ್ ಬ್ಯಾಂಕ್ ಶಾಖೆ ಆರಂಭವಾಯಿತು.

## ಅಪಾಯಕರ ಮುತ್ತು !

ಮೊನ್ನೆ ಸಿಸಿಲಿಯಲ್ಲಿ ಕಾಟಿಯಾದಿಂದ ಬಂದಿರುವ ವಾರ್ತೆ: 28 ವರ್ಷದ ಕಾರ್ಮೆಲಾ ಪೆನಾಂಬಿಕೋ ಎನ್ನುವಳು, ಅಡ್ರೆನೋ ಎಂಬಲ್ಲಿ ಫ್ರಾನಿಸ್ಕೊ ಲೀಟಾ ಎಂಬುವನನ್ನು ಗುಂಡಿನಿಂದ ಹೊಡೆದ ಗಾಯಗೊಳಿಸಿದಳು: ಅವನು ಅವಳಿಗೆ ಕೆಲವು ತಿಂಗಳ ಹಿಂದೆ ಮುತ್ತಿಟ್ಟಿದ್ದನೆಂದೂ, ಈಗ ವಿವಾಹವಾಗಲು ನಿರಾಕರಿಸಿದ್ದಕ್ಕೆ ಹೀಗೆ ಮಾಡಿದಳೆಂದು ಪೋಲೀಸರು ತಿಳಿಸಿರುವರು

೦೦

ಬಿಹಾರಿನ ಧನಬಾದಿನಲ್ಲಿ ಶೀತ ವೈಪರಿತ್ಯದಿಂದ 3 ದಿನಗಳಲ್ಲಿ 6 ಮಂದಿ ಸತ್ತಿರುವರು

ಪೋರ್ಚುಗೀಸರು ನಿರ್ಬಂಧದಲ್ಲಿಟ್ಟಿರುವ ಭಾರತೀಯರ ಬಗ್ಗೆ ಪ್ರವೇಶ ಮಾಡಬೇಕೆಂದು ಭಾರತ ಬ್ರಿಟನ್ನನ್ನು ಕೋರಿದೆ.

ಮಕ್ಕಳಲ್ಲಿ ಉಂಟಾಗುವ ಅತಿಸಾರ ಸಂಶೋಧನೆಗೆ ಒಂದು ಸಂಶೋಧನೆ ತಂಡ ವೆಲ್ಲೂರಿನ ವೈದ್ಯಕೀಯ ಆಸ್ಪತ್ರೆ ಕಾಲೇಜಿನಲ್ಲಿ ಮಂಜೂರಾಗಿದೆ.

### ಸಾಳೆಯ ಪಂಚಾಂಗ

ಆಸ್ಥಾನ ಮಹಾವಿದ್ವಾನ್ ಧರ್ಮಾಧಿಕಾರಿ
ದೈವಜ್ಞಶಿಖಾಮಣಿ
ಪಂಪಶ್ಯಾಸ್ತ್ರ ಜ್ಯೋಯಿಸರಿಂದ
4 ತ್ರಯೋದಶಿ ಜ್ಯೇಷ್ಠ

## ವಿವಿಧ ವಿಷಯಗಳು

ಫಾಸಿಸ್ಟ್ ಒಬ್ಬಗಾಗುವಂತೆ ಆಜ್ಞೆ ಆಗಿರುವ ಅಡಾಲ್ಫ್ ಐಕ್ಮೆರಿಗೆ ಅಪೀಲು ಹೂಡಲು ಒಂದು ತಿಂಗಳು ಅವಕಾಶ ಆಗಿದೆ ಎಂದು ಜೂರಿಸಲೆಂ ವಾರ್ತೆ.

ಬಿಹಾರು ಪ್ರಾಂತ ಭೂದಾನ ಸೇವಕ ಸಮಾಜದವರು ತನ್ನ ಕಾರ್ಯಕರ್ತರಿಗೆ ಸೂಚನೆ ಇತ್ತು, ಮಹಾ ಚುನಾವಣೆಯಲ್ಲಿ ಚಟುವಟಿಕೆಯ ಕ್ರಮ ತೆಗೆದುಕೊಳ್ಳದಿರುವಂತೆ ಸೂಚಿಸಿದೆ.

ತಾಲ್ಲೂಕು ಬೋರ್ಡುಗಳ ಅಧ್ಯಕ್ಷರಿಗೆ ವಾರ್ಷಿಕ ಸಂಭಾವನೆ ರೂ 2000 ಕೊಡುವುದಾಗಿ ಯೋಜನೆಯು ಉಪಮಂತ್ರಿ ಶ್ರೀ ಹೆಚ್ ಸಿ ಲಿಂಗಾರೆಡ್ಡಿ ಗುಡಿಬಂಡೆಯಲ್ಲಿ ತಿಳಿಸಿರುವರು

ಪಂ|| ನೆಹರು ಒರಿಸ್ಸಾದ ಭುವನೇಶ್ವರಕ್ಕೆ ಆಗಮಿಸಿರುವರು

ವರದರಾಜು 1 — ಸ್ವತಂತ್ರ ಪಾರ್ಟಿಯೊಡನೆ ಡಿ ಎಂ ಕೆ ಯು ಚುನಾವಣಾ ಒಪ್ಪಂದವನ್ನು ಡಿ ಎಂ ಕೆ ನಾಯಕ ಅಣ್ಣಾದೊರೈ ತಿರಸ್ಕರಿಸಿದ್ದಾರೆ.

ಒಸ್ಲೊ 1— ನಾರ್ವೆಯಲ್ಲಿರುವ ಕೆಲವು ಬೀದಿಗಳಲ್ಲಿರುವ ನಲ್ಲಿಗಳಲ್ಲಿಯ ನೀರಿನಿಂದ ಸ್ನಾನಮಾಡಿದರೆ ತಲೆಕೂದಲು ಹಸರು ಬಣ್ಣಕ್ಕೆ ತಿರುಗುತ್ತಿರುವುದೆಂದು ಪ್ರಕಟವಾಗಿದೆ

ಭಾರತದ ಅಭಿವೃದ್ಧಿ ಪ್ರಯತ್ನಗಳನ್ನು ಬೆಂಬಲಿಸುವವರಿಗೆ ತಿಳಿಸಲು ಮಾಸ್ಕೋದಲ್ಲಿ ಸಂತೆ ಏರ್ಪಡಿಸಲು ಭಾರತ ಸರ್ಕಾರ ಯೋಚಿಸಿದೆ ಎಂದು ದೆಹಲಿ ವಾರ್ತೆ. ಈ ವರ್ಷ ಮೇ ಅಥವಾ ಜೂನಿನಲ್ಲಿ ಸಂತೆ ನಡೆಯಬಹುದು

★

ಪಂಜಾಬಿನ ಲೂಧಿಯಾನಾದಲ್ಲಿ ಅದ್ಭುತ ಘಟನೆ ಭಾರತೀಯ ಮದುವೆ ನಡೆಯಿತು. ವರ ವಧುವನ್ನು ಎರಡು ಬಾರಿ ಧಾರ್ಮಿಕವಾಗಿ ಸುತ್ತು ಹಾಕಿಸಿದನು. ಮತ್ತೆರಡು ಸುತ್ತಿಗೆ ತನ್ನನ್ನು ಹಿಂಬಾಲಿಸಬೇಕೆಂದು ವರನನ್ನು ವಧು ಒತ್ತಾಯ ಮಾಡಿದಳು. ಹೆಸರಾಂತ ಪುರೋಹಿತರಿಗೆ ಇದು ಆಶ್ಚರ್ಯವುಂಟು ಮಾಡಿತು. ಪಥುವನ್ನು ವರ ಹಿಂಬಾಲಿಸಿ ಸುತ್ತಿದನು ಇದು ವಿವಾಹದಲ್ಲಿ ಸಮಾನತೆಯಂತೆ!

### ಕುಟುಂಬ ಯೋಜನೆ

ನವದೆಹಲಿ 1— ತೃತೀಯ ಪಂಚವಾರ್ಷಿಕ ಯೋಜನೆಯಲ್ಲಿ ಕುಟುಂಬ ಯೋಜನೆಗಾಗಿ 26 ಕೋಟಿ 97 ಲಕ್ಷ 57 ಸಹಸ್ರ ರೂಗಳ ಹಣವನ್ನು ನಿಗದಿ ಮಾಡಿರುವುದಾಗಿ ಕೇಂದ್ರ ಆರೋಗ್ಯ ಮಂತ್ರಿಶಾಖೆಯವರು ರಾಜ್ಯ ಸರಕಾರಗಳಿಗೆ ಕಳುಹಿಸಿರುವ ಪರಿಪತ್ರವೊಂದರಲ್ಲಿ ತಿಳಿಸಿದ್ದಾರೆ ಈ ಪೈಕಿ 20 ಕೋಟಿ ರೂಗಳನ್ನು ಕೇಂದ್ರ ಕ್ಷೇತ್ರದಲ್ಲಿಯೂ 6 ಕೋಟಿ 97 ಲಕ್ಷ 57 ಸಹಸ್ರ ರೂಗಳನ್ನು ರಾಜ್ಯ ಕ್ಷೇತ್ರಗಳಲ್ಲಿಯೂ ವೆಚ್ಚಮಾಡಲಾಗುವುದು.

### ಹಣ ದುರುಪಯೋಗಕ್ಕೆ ಕಠಿಣ ಸಜೆ

ಬೆಂಗಳೂರು 1— ವೆಸರ್ವ ಚೆಲ್ಮ್ಸ್‌ಫರ್ಡ ಅಂಡ್ ಕಂಪೆನಿಯ ಮ್ಯಾನೇಜಿಂಗ್ ಡೈರೆಕ್ಟರು ಶ್ರೀ ಎಸ್ ಆರ್ ರಾಮಕೃಷ್ಣಯ್ಯನವರು ಎಸೆಗಿದ ನಂಬಿಕೆದ್ರೋಹ ಹಾಗೂ ಹಣ ದುರುಪಯೋಗದ ಅಪರಾಧಕ್ಕಾಗಿ ಒಂದೂವರೆ ವರ್ಷ ಕಠಿಣ ಸಜೆ ಮತ್ತು 5000 ರೂಗಳ ಜುಲ್ಮಾನೆ ತಪ್ಪಿದರೆ ಇನ್ನೂ ಆರು ತಿಂಗಳು ಜೈಲುವಾಸದ ಶಿಕ್ಷೆಗೆ ಗುರಿಯಾಗಿದ್ದಾರೆ

### ಡಾರ್ಜಲಿಂಗಿನಲ್ಲಿ ಅಂತರರಾಷ್ಟ್ರೀಯ ವಿಚಾರಗೋಷ್ಠಿ

ಡಾರ್ಜಲಿಂಗು 1— ಅಶ್ಮನ್ನತ ಪ್ರದೇಶಗಳಲ್ಲಿ ಎದುರಿಸಬೇಕಾಗುವ ತೊಂದರೆಗಳ ಬಗ್ಗೆ ಅಂತರರಾಷ್ಟ್ರೀಯ ವಿಚಾರಗೋಷ್ಠಿಯೊಂದು ಇಲ್ಲಿ ಜನವರಿ 5 ರಿಂದ 8 ರವರೆಗೆ ನಡೆಯಲಿತ್ತದೆ — ಈ ಗೋಷ್ಠಿಯಲ್ಲಿ ಬ್ರಿಟನ್, ಜರ್ಮನಿ, ಸ್ವಿಡ್ಜರ್ಲೆಂಡು, ಜಪಾನ್, ರಷ್ಯಾಗಳಿಂದ ಬರುವ ಪ್ರವೀಣರು ಭಾಗವಹಿಸುವರು.

### ಉಚಿತವಾಗಿ ಗರ್ಭನಿರೋಧಕಗಳ ಹಂಚಿಕೆ

ನವದೆಹಲಿ 1— ಗ್ರಾಮಾಂತರ ಪ್ರದೇಶಗಳಲ್ಲಿ ವ್ಯಕ್ತಿಯ ವಂಶಾನವನ್ನು ಗಣನೆಗೆ ತೆಗೆದುಕೊಳ್ಳದೇ ಗರ್ಭನಿರೋಧಕಗಳನ್ನು ಹಂಚಬೇಕೆಂದು ಕೇಂದ್ರ ಆರೋಗ್ಯ ಮಂತ್ರಿಶಾಖೆಯು ನಿರ್ಧರಿಸಿದೆ.

### ದುರ್ವರ್ತನೆಯ ಸರಕಾರಿ ಅಧಿಕಾರಿಗಳು

ನವದೆಹಲಿ 1— 17 ಜನ ಗೆಜಿಟೆಡ್ ಅಧಿಕಾರಿಗಳೂ ಸೇರಿ 126 ಜನ ಸರ್ಕಾರಿ ಉದ್ಯೋಗಿಗಳು 1961 ರ ನವೆಂಬರು ತಿಂಗಳಲ್ಲಿ ಬಹಿರಂಗ ವಿಚಾರಣೆಗೆ ಗುರಿಯಾಗಿದ್ದಾರೆಂದು ವಿಶೇಷ ಪೋಲೀಸು ಸೇವಾ ವಿಭಾಗ ವರದಿ ಮಾಡಿದೆ .... ಹದಿನಾರು ಜನ ಸರ್ಕಾರಿ ಉದ್ಯೋಗಿಗಳು ಮತ್ತು 11 ಜನ ಖಾಸಗಿಯವರು 5 ವರ್ಷಗಳವರೆಗೆ ಶಿಕ್ಷೆಗೆ ಗುರಿಯಾದರು ಮತ್ತು ಒಟ್ಟು 64560 ರೂಗಳ ಜುಲ್ಮಾನೆ ವಿಧಿಸಲ್ಪಟ್ಟರು .... ನವೆಂಬರು ತಿಂಗಳಲ್ಲಿ, ಲಂಚಗುಳಿತನ, ದುರ್ವರ್ತನೆ, ಮೋಸ, ಮತ್ತು ನಂಬಿಕೆದ್ರೋಹ ಆಪಾದನೆಗಳ ಮೇಲೆ 21 ಜನ ಸರ್ಕಾರಿ ಉದ್ಯೋಗಿಗಳ ವಿರುದ್ಧ ಮೊಖದ್ದಮೆಗಳನ್ನು ಹೂಡಲಾಯಿತು : ಇವರ ಪೈಕಿ ಇಬ್ಬರು ಗೆಜಿಟೆಡ್ ಅಧಿಕಾರಿಗಳಾಗಿದ್ದಾರೆ.


## Help ' The Gorakshana '

**Advertise in Goraksana and help the pious cause**

**ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ**

**" ಗೋರಕ್ಷಣ " ಪತ್ರಿಕೆಗೆ ಬೆಂಬಲಿಗರಾಗಿರಿ**

ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಚಾರಗಳ ಪ್ರಚಾರ ಏಕೈಕ ಕನ್ನಡ ಪತ್ರಿಕೆ.

ಗೋರಕ್ಷಣ ಪತ್ರಿಕೆಗೆ ಸಹಾಯಧನ್ಯ ಮತ್ತು ಪ್ರಕಟಿಸಲು ಅನುಕೂಲವಾದ ಲೇಖನಗಳನ್ನೂ ವಾರ್ತೆಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಿಳಾಸ : ಗೋರಕ್ಷಣ ಆಫೀಸ್, ಚಾಮರಾಜಪುರಂ, ಮೈಸೂರು 4



## ವುಡ್‌ಲ್ಯಾಂಡ್ಸ್ ಕೀರ್ತಿಯುತ 4 ನೇ ವಾರ

## ಜಬ್ ಪ್ಯಾರ್ ಕಿಸೀಸೆ ಹೋತಾಹೈ

ದೇವ್‌ಆನಂದ್, ಆಶಾ ಪರೀಖ್ ಮತ್ತಿರ ಪ್ರಖ್ಯಾತ ತಾರೆಯರು ಪಾತ್ರವಹಿಸಿರುವ

ಅತ್ಯುಂಶ ಮನರಂಜನ ಹಿಂದಿ ಚಿತ್ರ [ ದಿನವಹಿ 3 ಪ್ರದರ್ಶನಗಳು

## ಅಪೆರಾ— 29—12—61 ರಿಂದ

## ನಾಗಾರ್ಜುನ (ಕನ್ನಡ)

ತಾರಾಗಣ— ರಾಜಕುಮಾರ್, ನಾಗಯ್ಯ, ವಂಚಲಕ್ಷ್ಮಿ, ಹರಿಣಿ, ನರಸಿಂಹರಾಜು ಕಾಂತಾ ರಾವ್, ರಾಜನಾಲ [ ದಿನವಹಿ 3 ಆಟಗಳು ]

## SHAKTI SUDHA

**A Superb Tonic**

ಅಮೇರಿಕಾದಲ್ಲಿ ವಿದ್ಯಾರ್ಥಿ ಜೀವನ ' ಪ್ರದರ್ಶನದ ಒಂದು ದೃಶ್ಯ

Edited, Printed & Published by the Proprietor, Dharma Prachara Nirata M. S. Krishna Rao. at the Satyavadi Press Chamarajapuram, Mysore 4.